22	ಬಾಳಹಳ್ಳಿ	114, 93, 147, 145, 119, 173, 151, 149, 114, 98, 94, 148, 146, 144, 121, 95, 41, 42	
23	ಮರಾಠಿ	111, 149, 173, 175, 176, 177, 179, 192, 193	
24	ಬಳ್ಳೂರು	24, 25, 34, 41, 42	
25	ನಾಡ್ಪಾಲು	126/1	

ಹುಲಿ ಸಂರಕ್ಷಣಾ ಯೋಜನೆ

559 (824) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಿ ಸಂರಕ್ಷಣಾ ಯೋಜನೆಯನ್ನು ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾಗುವುದೇ;

ಆ) ಹಾಗಿದ್ದಲ್ಲಿ ಅನುಷ್ಠಾನಗೊಂಡ ತಾಲ್ಲೂಕಿನಲ್ಲಿ ಯಾವ ಪ್ರದೇಶಗಳು ಒಳಪಡುವುದು;

ಇ) ಹುಲಿ ಸಂರಕ್ಷಣಾ ಯೋಜನೆಯನ್ನು ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ ಅನುಷ್ಠಾನಗೊಳಿಸುವುದೇ?

ಈ) ಸದರಿ ಯೋಜನೆಯನ್ನು ರಾಜ್ಯ ಸರ್ಕಾರ ಅನುಷ್ಠಾನ ಗೊಳಿಸಿದಲ್ಲಿ ಅದರ ಸಂಪೂರ್ಣ ವಿವರ ನೀಡುವುದು?

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು) :

ಅ) ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯು ಒಳಗೊಂಡಂತೆ ಹುಲಿ ಸಂರಕ್ಷಣಾ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಕೇಂದ್ರ ಸರ್ಕಾರವು ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು, ರಾಜ್ಯ ಸರ್ಕಾರವು ಇನ್ನೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಕೇಂದ್ರ ಪುರಸ್ಕೃತ ಯೋಜನೆಯನ್ವಯ ಹುಲಿ ಸಂರಕ್ಷಣೆ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕಾರ್ಯರೂಪಕ್ಕೆ ಬರುತ್ತದೆ. ಕೇಂದ್ರ ಸರ್ಕಾರದ ಆರ್ಥಿಕ ಅನುದಾನ ಮತ್ತು ಆಂತರಿಕ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರವು ಅನುಷ್ಠಾನಗೊಳಿಸುತ್ತದೆ. ಆದರೆ ಸದರಿ ಯೋಜನೆಯ ಬಗ್ಗೆ ರಾಜ್ಯ ಸರ್ಕಾರ ಇನ್ನೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಕಂದಾಯ ಇಲಾಖೆಗೆ ಜಮೀನು

567 (945) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಕಂದಾಯ ಇಲಾಖೆಗೆ ಎಷ್ಟು ವಿಸ್ತೀರ್ಣ ಜಮೀನನ್ನು ಅರಣ್ಯ ಇಲಾಖೆ ಹಸ್ತಾಂತರಿಸಿದೆ; (ಜಿಲ್ಲಾವಾರು ವಿವರ ಒದಗಿಸುವುದು);

ಆ) ಅರಣ್ಯ ಇಲಾಖೆಯ ಎಷ್ಟು ವಿಸ್ತೀರ್ಣದ ಜಮೀನಿನಲ್ಲಿ ರೈತರು ಸಾಗುವಳಿ ಮಾಡಿ ಫಲಾನುಭವಿಗಳಾಗಿದ್ದಾರೆ; ಈ ಜಿಲ್ಲಾವಾರು ವಿವರ ಒದಗಿಸುವುದು);

ಇ) ಅರಣ್ಯ ಇಲಾಖೆಯ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ಸಣ್ಣ/ಅತಿ ಸಣ್ಣ ರೈತರಿಗೆ ಜಮೀನು ಬಿಟ್ಟುಕೊಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಸಿ.ಪಿ. ಯೋಗೇಶ್ವರ್ (ಅರಣ್ಯ ಸಚಿವರು) :

ಅ) ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯ ರವರ ಪತ್ರ ಸಂಖ್ಯೆ:8-7/97-ಎಫ್ ಸಿ ದಿನಾಂಕ: 19/07/1995ರ ಪತ್ರದಲ್ಲಿ ಗಿರಿಜನರ ಪುನರ್ವಸತಿಗಾಗಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ವೀರನಹೊಸಳ್ಳಿ ಮೀಸಲು ಅರಣ್ಯದ 401.00 ಹೆಕ್ಟೇರ್ ಮತ್ತು ಸೊಳ್ಳೇಪುರ ಮೀಸಲು ಅರಣ್ಯ 330.00 ಹೆಕ್ಟೇರ್ ಒಟ್ಟು 731.00 ಹೆಕ್ಟೇರ್ ಅರಣ್ಯ ಪ್ರದೇಶದ ಬಿಡುಗಡೆ ಮಾಡಿದ್ದು, ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ದಿಂದ ಪುನರ್ವಸತಿಗೊಳಿಸಿರುವ ಗಿರಿಜನರಿಗೆ ಹಕ್ಕುಪತ್ರ ನೀಡುವ ಸಲುವಾಗಿ ಕಂದಾಯ ಪ್ರದೇಶವೆಂದು ಬದಲಾವಣೆ ಮಾಡಲಾಗಿರುತ್ತದೆ. ಉಳಿದ